# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರೈತ ಸಂಪರ್ಕ ಕೇಂದ್ರ ಬಲವರ್ಧನ ಕುರಿತು 2 ತಿಂಗಳ ಅವಧಿಯಲ್ಲಿ ಸಲಹೆಯನ್ನು ನೀಡುವ ಬಗ್ಗೆ ತಂಡವನ್ನು ರಚಿಸುವ ಕುರಿತು.

ಓದಲಾಗಿದೆ: ಮಾನ್ಯ ಕೃಷಿ ಸಚಿವರ ರವರ ಟಿಪ್ಪಣಿ ಸಂಖ್ಯೆ: ಕೃ.ಸ/35/2018-19 ದಿನಾಂಕ 17.12.2018.

**ಪ್ರಸ್ತಾವನೆ:**

ಮೇಲೆ ಓದಲಾದ ಟಿಪ್ಪಣಿಯಲ್ಲಿ ಮಾನ್ಯ ಕೃಷಿ ಸಚಿವರವರು ರೈತ ಸಂಪರ್ಕ ಕೇಂದ್ರಗಳು ರೈತರಿಗೆ ಕೃಷಿ ಮಾಹಿತಿ ನೀಡುವುದಕ್ಕಿಂತಲೂ ಪರಿಕರಗಳ ಮಾರಾಟಕ್ಕೆ ಹೆಚ್ಚು ಒತ್ತು ನೀಡುತ್ತಿದ್ದು, ಕೃಷಿ ವಿಸ್ತರಣ ಅಧಿಕಾರಿಗಳು ಯಾವುದೇ ತರಹದ ವಿಸ್ತರಣಾ ಕಾರ್ಯಕ್ರಮಗಳಿಗೆ ಸಮಯ ಸಂಪೂರ್ಣ ನೀಡದೆ ಇರುವುದು ಸಾರ್ವಜನಿಕರ ಗಮನಕ್ಕೆ ಬಂದಿದ್ದು, ಈ ವ್ಯವಸ್ಥೆಯಲ್ಲಿ ಬದಲಾವಣೆ ತಂದು ಕೃಷಿ ಇಲಾಖೆ ಅಧಿಕಾರಿಗಳಿಂದ ವಿಸ್ತರಣೆಯನ್ನು ಸಬಲಗೊಳಿಸಲು ಪ್ರಸ್ತುತ ಇರುವ ರೈತ ಸಂಪರ್ಕ ಕೇಂದ್ರ ಬಲವರ್ಧನೆ ಮಾಬೇಕಾಗಿರುವುದರಿಂದ ಡಾ: ಎಸ್.ಎ. ಪಾಟೀಲ, ವಿಶ್ರಾಂತ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ, ಈ ಕುರಿತು ಅಧ್ಯಯನ ಮಾಡಿ 2 ತಿಂಗಳ ಅವಧಿಯಲ್ಲಿ ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡುವಂತೆ ಆದೇಶ ಹೊರಡಿಸಲು ಸೂಚಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಸದರಿ ಸಮಿತಿಗೆ ಡಾ: ಎಸ್.ಎ. ಪಾಟೀಲ, ವಿಶ್ರಾಂತ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರನ್ನು ಅಧ್ಯಕ್ಷರನ್ನಾಗಿ ಹಾಗೂ ಶ್ರೀ ಎಸ್.ಎಸ್. ಪಾಟೀಲ, ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರನ್ನು ಸದಸ್ಯರನ್ನಾಗಿ ಮತ್ತು ಶ್ರೀ ರವಿ ದೇಶ್‌ಮುಖ್, HoD, KVK Bidar (Janawada), ಕೃಷಿ ವಿಶ್ವವಿದ್ಯಾಲಯ, ರಾಯಚೂರು ಇವರನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

## ಸರ್ಕಾರದ ಆದೇಶ ಸಂಖ್ಯೆ: ಕೃಇ 170 ಕೃಇಕ 2018, ಬೆಂಗಳೂರು, ದಿನಾಂಕ 06.02.2019

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಕೃಷಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಾಜ್ಯದ ರೈತ ಸಂಪರ್ಕ ಕೇಂದ್ರಗಳನ್ನು ರೈತ ಸ್ನೇಹಿಯಾಗಿ ಸಬಲಗೊಳಿಸಲು ಹಾಗೂ ರೈತ ಸಂಪರ್ಕ ಕೇಂದ್ರಗಳ ಬಲವರ್ಧನೆಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಲು ಡಾ: ಎಸ್.ಎ. ಪಾಟೀಲ, ವಿಶ್ರಾಂತ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಸಮಿತಿಯನ್ನು ರಚಿಸಲಾಗಿದೆ.

| ಕ್ರಮ ಸಂ. | ಹೆಸರು ಹಾಗೂ ಪದನಾಮ | ನೇಮಿಸಿರುವ ಹುದ್ದೆ |
|---|---|---|
| 1 | ಡಾ: ಎಸ್.ಎ. ಪಾಟೀಲ,<br>ವಿಶ್ರಾಂತ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ | ಅಧ್ಯಕ್ಷರು |
| 2 | ಶ್ರೀ ಎಸ್.ಎಸ್. ಪಾಟೀಲ,<br>ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ | ಸದಸ್ಯರು |
| 3 | ಶ್ರೀ ರವಿ ದೇಶ್‌ಮುಖ್,<br>HoD, KVK Bidar (Janawada)<br>ಕೃಷಿ ವಿಶ್ವವಿದ್ಯಾಲಯ, ರಾಯಚೂರು | ಸದಸ್ಯ ಕಾರ್ಯದರ್ಶಿ |

1. ಸಮಿತಿಯು ರೈತ ಸಂಪರ್ಕ ಕೇಂದ್ರಗಳ ಹಾಗೂ ಅಧಿಕಾರಿಗಳ ಕಾರ್ಯ ನಿರ್ವಹಣೆಯನ್ನು ಅಭ್ಯಸಿಸಿ, ರೈತರ ಅಭಿಪ್ರಾಯದೊಂದಿಗೆ ಸುಧಾರಣಾ ಕ್ರಮಗಳ ಬಗ್ಗೆ ಅಧ್ಯಯನ ನಡೆಸುವುದು.
2. ಸಮಿತಿಯ ಅಗತ್ಯಕ್ಕೆ ತಕ್ಕಂತೆ ವಾಹನ, ಮಾನವ ಸಂಪನ್ಮೂಲ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಕೃಷಿ ಆಯುಕ್ತಾಲಯದಿಂದ ಒದಗಿಸತಕ್ಕದ್ದು.
3. ಸಮಿತಿಯ ಸದಸ್ಯರಿಗೆ ನಿಯಮಾನುಸಾರ ನಿಗದಿತ ಗೌರವಧನವನ್ನು ಕೃಷಿ ಆಯುಕ್ತಾಲಯದಿಂದ ಪಾವತಿಸತಕ್ಕದ್ದು.
4. ಸಮಿತಿಯ ಅಧ್ಯಯನಕ್ಕೆ ಜಿಲ್ಲಾ / ತಾಲ್ಲೂಕು / ಹೋಬಳಿ ಮಟ್ಟದ ಅಧಿಕಾರಿಗಳು ಸೂಕ್ತ ಸಹಕಾರ ನೀಡುವಂತೆ ಎಲ್ಲಾ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.
5. ಈ ಸಮಿತಿಯು **2 ತಿಂಗಳ ಅವಧಿಯೊಳಗೆ** ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು".

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

B S Nagaratnam

(ಬಿ.ಎಸ್. ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1
2. ಪ್ರಧಾನ ಮಹಾಲೇಖಪಾಲರು(ಇ&ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1
3. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
4. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು
5. ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ / ರಾಯಚೂರು
6. ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು
7. ಡಾ: ಎಸ್.ಎ. ಪಾಟೀಲ, ವಿಶ್ರಾಂತ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ
8. ಶ್ರೀ ಎಸ್.ಎಸ್. ಪಾಟೀಲ, ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ
9. ಶ್ರೀ ರವಿ ದೇಶ್‌ಮುಖ್, HoD, KVK Bidar (Janawada), ಕೃಷಿ ವಿಶ್ವವಿದ್ಯಾಲಯ, ರಾಯಚೂರು
10. ಮಾನ್ಯ ಕೃಷಿ ಸಚಿವರವರ ಆಪ್ತ ಕಾರ್ಯದರ್ಶಿಗಳು
11. ರಾಜ್ಯದ ಎಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ
12. ರಾಜ್ಯದ ಎಲ್ಲಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳಿಗೆ
13. ರಾಜ್ಯದ ಎಲ್ಲಾ ಹೋಬಳಿ ಮಟ್ಟದ ಕೃಷಿ ಅಧಿಕಾರಿಗಳಿಗೆ
14. ಸರ್ಕಾರದ ಜಂಟಿ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ, ಬೆಂಗಳೂರು.
15. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
16. ಸರ್ಕಾರದ ಉಪ ಕಾರ್ಯದರ್ಶಿ-1 & 2 ರವರ ಆಪ್ತ ಸಹಾಯಕರು, ಕೃಷಿ ಇಲಾಖೆ, ಬೆಂಗಳೂರು.
17. ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿಗಳು.

(ಕ್ರಮ ಸಂಖ್ಯೆ: 11, 12, 13 ಕೃಷಿ ಆಯುಕ್ತರವರ ಮೂಲಕ)